At Ranjit
From 5-7-46
Bahoo Betiyan
ಕರಣದಿವರ — ನಿರ್ಮಲ
ಯೂಕೂಬ — ಪಾತ್ರವಹಿಸಿರುವ
ಬಹು - ಬೇಟಿಯೆ

Regd. No. M 1299 SATYAVADI Founded 1917

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 29 ಸಂಚಿಕೆ 237 | ಸೋಮವಾರ 8-7-46 | ಬಿಡಿ ಪ್ರತಿ 3 ಪೈ.

At Opera
From 6-7-46
LAVANGI
ರಾವ್ — ರುಕ್ಮಿಣಿ — ಜಯಮ್ಮ
ಪಾತ್ರವಹಿಸಿರುವ
ಲವಂಗಿ (ತಮಿಳು)

ನಿಯೋಗ ಯೋಜನೆ ಒಪ್ಪಲು ಗಾಂಧೀಜಿ ಬುದ್ಧಿವಾದ

ಸುಭಾಷರ ರಜತಾ ರ್ಾಟಿ

ಪಂ|| ನೆಹರುವಿಗೆ ಪಾರಿತೋಷಕ

ಬೊಂಬಾಯಿ ಜುಲೈ 5 — ಅಜಾದ್ ಹಿಂದ್ ಸರ್ಕಾರ ಪ್ರಾರಂಭದ ದಿವಸಗಳಲ್ಲಿ ಮಲೆಯಾದಲ್ಲಿ ಶ್ರೀ ಸುಭಾಷ್ ಚಂದ್ರ ಬೋಸರಿಗೆ ರಜತ ಪಟ್ಟಿಯು ರಾಟೆ ಪಾರಿತೋಷಕ ಮಾಡಲ್ಪಟ್ಟಿತು.

ದೊರೆತ ಬಗೆ — ಭಾರತ ರಾಷ್ಟ್ರೀಯ ದಳಕ್ಕೆ ಹಣದ ಅವಶ್ಯಕತೆ ಉಂಟಾಯಿತು. ರಾಟೆಯನ್ನು ಹರಾಜು ಹಾಕಲಾಯಿತು. ಭಾರತೀಯ ನೊಬ್ಬನು ಹರಾಜಿನಲ್ಲಿ ಒಂದು ಲಕ್ಷ ರೂಪಾಯಿಗಳಿಗೆ ಕೊಂಡು ಅದನ್ನು ಭದ್ರಪಡಿಸಿದನು. ಅದೇ ಭಾರತೀಯನು ಕಳೆದ ಮಾರ್ಚಿಯಲ್ಲಿ ಪಂ||ನೆಹರು ಮಲೆಯಾ ಪ್ರವಾಸ ಕಾಲದಲ್ಲಿ ಸಿಂಗಪುರದಲ್ಲಿ ಪಾರಿತೋಷಕವಾಗಿ ಕೊಟ್ಟನು.

ಸಿಂಧಿನಲ್ಲಿ ಹಿಂದೂಗಳ ಸ್ಥಿತಿ

ಸಿಂಧ್ ಪ್ರಾಂತ್ಯದಲ್ಲಿ ಲೀಗು ಪ್ರಭುತ್ವವು ಯಾವ ಬಗೆಯಲ್ಲಿ ಹಿಂದೂಗಳ ಹಕ್ಕುಗಳನ್ನೂ, ಅವರ ಜೀವನ ವಿಧಾನವನ್ನೂ ಭಂಗಪಡಿಗುತ್ತಿರುವುದೋ ಅಲ್ಲಿಯ ಕಾಂಗ್ರೆಸ್ ಸದಸ್ಯರು ಈ ಬೆಗೆ ಕಣ್ಣು ತೆರೆದು ಗಮನಿಸಿರುವರು. ಉದ್ಯೋಗ ಕೊಡುವುದರಲ್ಲಿ ಎನು, ವರ್ತಕ ವ್ಯಾಪಾರಗಳಿಗೆ ಲೈಸನ್ಸು ಕೊಡುವ ವಿಷಯದಲ್ಲಿ ಏನು, ಶೇಕಡಾ 30 ಕ್ಕಿಂತ ಹೆಚ್ಚಾಗಿರುವ ಸಿಂಧೂ ದೇಶದ ಹಿಂದೂ ದೇಶದ ಪ್ರಜೆಗಳಿಗೆ ನಡೆಯಲಿರುವ ಅನ್ಯಾಯಗಳನ್ನೂ ಅತ್ಯಮಗಳನ್ನೂ ಕುರಿತು ಕಾಂಗ್ರೆಸಿನವರು ಈಜೆಗೆ ವಿವರಗಳನ್ನು ಶೇಖರಿಸಿ ಅದನ್ನು ಕಾಂಗ್ರೆಸ್ ಕಾರ್ಯ ಸಮಿತಿಗೆ ನಿವೇದನೆ ಮಾಡಿಕೊಳ್ಳಲಿರುವ ರೆಂದು ತಿಳಿಯಬಂದಿದೆ (ದಿ. ವಾ)

ನ್ಯಾಯವಿಧಾಯಕ ಸಭೆ

ವಿ | ಬೆಂಗಳೂರು, ಜು.ಲೈ 6

'ಮೈಸೂರಿನ ಆಡಳಿತ ಮುರಿದು ಬಿದ್ದಿಲ್ಲ. ಹೀಗೆ ಹೇಳುವುದು ಅನ್ಯಾಯ. ಮಿ|| ಬ್ರೈಸ್ ಫರ್ಡರ (ಅಮೆರಿಕದ ಪತ್ರಿಕೋದ್ಯೋಗಿ) ಕ್ಷಾಮ ಪ್ರದೇಶಗಳ ಪ್ರವಾಸಗಳು ತೀರಿದ ನಂತರ ಟೀಕೆ ಮಾಡಿರುವುದು ಶುದ್ಧ ಅಸಂಭವ ಅನೃತ ಮತ್ತು ಅನ್ಯಾಯ. ಕೇವಲ ಏಕಪಕ್ಷ ರೀತಿಯಿಂದ ಟೀಕಿಸಿರುವುದು, ಅಸಮಂಜಸವಾದದು' ಎಂಬುದಾಗಿ ಆಹಾರಾಧಿಕಾರಿ ಶ್ರೀ ಜಿ. ಸುಂದರರಾಯರು ಅನ್ನ ಚರ್ಚೆಯ ಸಂಬಂಧದಲ್ಲಿ ತಿಳಿಸಿದರು.

ಸಂಸ್ಥಾನದ ಅನ್ನ ಪರಿಸ್ಥಿತಿಯ ಮೇಲೆ ಶ್ರೀಗಳಾದ ವೆಂಕಾಜಿರಾವ್, ಮಾದೆಗೌಡರು ನಿರ್ಣಯಗಳನ್ನು ಮಂಡಿಸಿದರು.

ಶ್ರೀಮತಿ ಲಕ್ಷ್ಮಮ್ಮನವರು ಸ್ತ್ರೀಯರಿಗೆ ದೇಹಧಾರ್ಢ್ಯರಾಗಿರುವಷ್ಟಕ್ಕಾಗಿ ದರೂ ನಿಯತ್ಕಾಗಿ ಆಹಾರವನ್ನು ಒದಗಿಸಬೇಕೆಂದು ತಿಳಿಸಿದರು.

ಸರ್ಕಾರದ ಪರವಾಗಿ ಆಹಾರಾಧಿಕಾರಿ, ಶ್ರೀ ಜಿ ಸುಂದರರಾಯರು ತಿಳಿಸಿದರು.

ಮಿ|| - ಬ್ರೈಸ್‌ಫರ್ಡ್‌ರವರಂಥಹ ಮಹನೀಯರನ್ನು ಸರ್ಕಾರ ಅಲ್ಲಗೆಳೆಯುವುದು ಉಚಿತವಲ್ಲವೆಂದು ಶ್ರೀ ಜಂಗಲರಾಯರೆಡ್ಡಿ ತಿಳಿಸಿದರು.

12 ಗಂಟೆಗೆ ರಾ|| ಪ್ರ|| ಹೆಚ್. ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದ ನ್ಯಾಯವಿಧಾಯಕ ಸಭೆಯು ಪ್ರಶ್ನೋತ್ತರಗಳಿಂದ ಕಾರ್ಯಾರಂಭ ಮಾಡಿತು.

ಶಾರದ ವಿಲಾಸ ಹೈಸ್ಕೂಲಿನ ಬಳಿ ಸಿನಿಮಾ ಕಟ್ಟಡ ಕಟ್ಟುತ್ತಿರುವ ಬಗ್ಗೆ ಶ್ರೀಮತಿ ಲಕ್ಷ್ಮಮ್ಮನವರು ಪ್ರಶ್ನಿಸಿದರು.

ಶ್ರೀ ಎಂ. ಸಿ. ಲಿಂಗೇಗೌಡರು ಶ್ರೀ ಟಿ. ಪುರಿಯಪ್ಪನವರಿಗೆ ನಿವೇಶನ ಕೊಟ್ಟದ್ದನ್ನು ಕುರಿತು ಪ್ರಶ್ನಿಸಿದರು.

ಅನ್ನ ಚರ್ಚೆ ಕಾಲದಲ್ಲಿ ಮಿ|| ಷರೀಫರು ಸಂಸ್ಥಾನದ ಆಹಾರ ಪರಿಸ್ಥಿತಿಯನ್ನು ವಿವರಿಸುತ್ತಾ 'ವಿದೇಶಗಳಿಂದ 30000 ಟನ್ನು ಆಹಾರ ಸರಬರಾಜು ಆಗಲಿರುವುದು ಜೂನ್ ತಿಂಗಳವರೆಗೆಂದು ಗೊತ್ತು ಮಾಡಲ್ಪಟ್ಟಿದೆ. ಮಳೆ ಬಾರದ ದೆಸೆಯಿಂದ 12 ಲಕ್ಷ ಧಾನ್ಯ ಪ್ರಮಾಣವನ್ನು ಇಳಿಸಲಾಯಿತು. 1942-1945 ರ ವರೆಗೆ ಆಹಾರ ಶಾಖೆಗೆ ಸರ್ಕಾರವು ರೂ. 32 ಲಕ್ಷ ಕೊಡಲಾಗಿದೆ. ಈ ವರ್ಷದಲ್ಲಿ 25 ಲಕ್ಷ ರೂ. ಕೊಡಲಾಗುವುದು. ಸಂಸ್ಥಾನದಲ್ಲಿ ಒಟ್ಟು 2666 ಡಿಪೋಗಳಿವೆ. 1500 ನಿರಾಶ್ರಿತರಿಗೆ ಸಂಸ್ಥಾನದ 53 ಕೇಂದ್ರಗಳಲ್ಲಿ ಆಹಾರ ಒದಗಿಸಲಾಗುತ್ತಿದೆ ಆಹಾರ ಇಲಾಖೆಗೆ ಪ್ರತ್ಯೇಕ ಕಾರ್ಯದರ್ಶಿಯನ್ನು ನೇಮಿಸಲಾಗುವುದು. ಕ್ಷಾಮ ಪ್ರದೇಶಗಳಲ್ಲಿ ಪ್ರವಾಸ ಮಾಡಿ ಸರಕಾರಕ್ಕೆ ಸಲಹೆ ಕೊಡಲು ವಿಶೇಷಾಧಿಕಾರಿಗಳನ್ನು ನೇಮಿಸಲಾಗುವುದು' ಎಂದರು. ಡಾ|| ರಾಯನ್ನರು ಕ್ಷಾಮ ಪ್ರದೇಶಗಳ ವೈದ್ಯಕೀಯ ಸಲಕರಣೆ ಬಗ್ಗೆ ರೂ. 5 ಲಕ್ಷ ವ್ಯಯವಾಗಿದೆ ಯೆಂದರು.

ಶ್ರೀ ಜಿ ಸುಂದರರಾಯರು ಹಳ್ಳಿಗಳಿಗೂ ಆಹಾರ ಸರಬರಾಜಾಗುತ್ತಿದೆ ಯೆಂದು ತಿಳಿಸಿದರು.

ನ್ಯಾ. ವಿ ಸಭೆ ಈ ಸಂಜೆ ಮುಗಿಯಿತು.

ಪೌರಸಭೆ

ಮೈಸೂರು, ಜುಲೈ 8 — ಮೈಸೂರು ನಗರದ ಪೌರಸಭಾ ವಿಶೇಷಾಧಿವೇಶನವು ನಾಳೆ ದಿನದ ಮಧ್ಯಾಹ್ನ 4 ಗಂಟೆಗೆ ಸೇರುವುದು.

ಇಂದಿನ ವರ್ತಮಾನ

ಬೊಂಬಾಯಿ ಜುಲೈ 7 — ಎ.ಐ.ಸಿ.ಸಿ ಯಲ್ಲಿ ಗಾಂಧೀಜಿ ಮಾಡಿದ ಭಾಷಣದಲ್ಲಿ ನಿಯೋಗ ಯೋಜನೆಯನ್ನು ಅಂಗೀಕರಿಸಿದರೆಂದು ಬುದ್ಧಿವಾದ ನೀಡಿದರು.

ಲಂಡನ್ ಜುಲೈ 5—ಭಾರತಕ್ಕೆ ಬಂದಿದ್ದ ಬ್ರಿಟಿಷ್ ಮಂತ್ರಿಮಂಡಲ ನಿಯೋಗಕ್ಕೆ ರಾಜರು ಭೇಟಿ ದಯಪಾಲಿಸಿದರು. ಆಲ್ಲೇ ಉಪಾಹಾರವೂ ಆಯಿತು.

ಬಿಕಿನಿ ಜುಲೈ 6 — 2 ನೇ ಅಣುಬಾಂಬು ಪ್ರಯೋಗವು 25 ನೇ ಜುಲೈ ನಲ್ಲಿ ನಡೆಯುವುದು.

ನೂಯಾರ್ಕ್ ಜು 7 — ರೊಚೆಸ್ಟರಿಂದ ನ್ಯೂಯಾರ್ಕಿಗೆ ತರಲಾಗುತ್ತಿದ್ದ ಅಣುಬಾಂಬು ಚಲನ ಚಿತ್ರ ಕಳುವಾಗಿದೆಯಂತೆ!

ವಾಷಿಂಗ್‌ಟನ್ ಜು 6 — ಬ್ರಿಟನ್ನಿಗೆ ಅಮೆರಿಕಾ ಸಾಲಾ ದೊರೆಯುವುದು ಸ್ವಲ್ಪ ಉತ್ಕಟಾವಸ್ಥೆಯಲ್ಲಿದೆ.

ಮತ್ತೆ ಗಲಭೆ

ಅಹಮದಾಬಾದ್ ಜುಲೈ 6 — ನಿನ್ನೆ ಕಫ್ಯೂ ಸಡಲಿಸಿದ್ದರಿಂದ ಮತ್ತೆ ಗಲಭೆ ಪ್ರಾರಂಭವಾಯಿತು. ಮತ್ತೆ ಹತೋಟಿಗೆ ತರಲಾಯಿತು.

ಲಂಚ ಮಟ್ಟು ಹಾಕಲು

ಲಂಚ ರುಷವತ್ತು ಕಾಳಸಂತೆ ಲಾಭ ಬಡಕತನವನ್ನು ಸದೆ ಬಡಿಯಲು ಮದರಾಸು ಸರಕಾರವು ಒಂದು ರಹಸ್ಯಶಾಖೆ ಸ್ಥಾಪಿಸಿರುವದು

ನೆಹರು ಕಾಂ| ಅಧ್ಯಕ್ಷರಾದರು

ಬೊಂಬಾಯಿ ಜುಲೈ 6 — ಎ.ಐ.ಸಿ.ಸಿ. ಅಧಿವೇಶನವು ಈ ಮಧ್ಯಾಹ್ನ ಪ್ರಾರಂಭವಾಯಿತು. ಮೌಲಾನ ಆಜಾದರು ಹಿಂದಿನ ವಿಷಯಗಳನ್ನು ಕುರಿತು ಭಾಷಣ ಮಾಡಿದನಂತರ ಪಂ|| ನೆಹರು ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡರು.

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ — ವ್ಯವಹಾರಗಳು ವಿರುದ್ಧವಾಗಿ ನಡೆಯುವವು ಆರೋಗ್ಯವು ಚನ್ನಾಗಿರುತ್ತದೆ ಖರ್ಚು ಹೆಚ್ಚು.

ವೃಷಭ — ವ್ಯವಹಾರದಲ್ಲಿ ವಿಘ್ನಗಳುಂಟು, ವ್ಯಯವು ಮಿತಿ ಮೀರುತ್ತದೆ ಅನಾರೋಗ್ಯ ಮನೋ ಚಿಂತೆ

ಮಿಥುನ — ಆರೋಗ್ಯವುಂಟು, ವ್ಯವಹಾರದಲ್ಲಿ ಯಶವುಂಟು, ಸ್ನೇಹಿತರೊಂದಿಗೆ ಭೇಟಿಯುಂಟು, ಖರ್ಚು ಹೆಚ್ಚು.

ಕಟಕ — ದೇಹ ಸ್ಥಿತಿಯು ಸುಯಾಗಿರದು, ವ್ಯವಹಾರದಲ್ಲಿ ಕಷ್ಟಗಳು ತಲೆದೋರುವವು. ಮನಸ್ಸಿಗೆ ಸ್ಥಿಮಿತವಿರುವುದಿಲ್ಲ

ಸಿಂಹ — ಆರೋಗ್ಯವು ಚನ್ನಾಗಿರುವದಿಲ್ಲ, ವ್ಯವಹಾರದಲ್ಲಿ ನಿಷ್ಠೂರಗಳು ಹೆಚ್ಚುವವು ಮನಸ್ಸಿಗೆ ಅಶಾಂತಿ.

ಕನ್ಯಾ — ಶಾರೀರಿಕ ವ್ಯವಹಾರಿಕ ಸ್ಥಿತಿಗಳು ನಟ್ಟಗಿರುವದಿಲ್ಲ. ಎಲ್ಲಾ ವಿಷಯಗಳಲ್ಲಿಯೂ ಎಚ್ಚರಿಕೆಯು ಅವಶ್ಯಕವಾಗಿರುತ್ತದೆ

ತುಲ — ಆರೋಗ್ಯಕ್ಕೇನೂ ಡೋಕೆ ಇಲ್ಲ, ಕೈಗೊಂಡ ಕಾರ್ಯಗಳಿಗೆ ಸಫಲವನ್ನು ಲಭಿಸುವುದು.

ವೃಶ್ಚಿಕ — ಎಲ್ಲಾ ವಿಷಯಗಳಲ್ಲಿಯೂ ಅನುಕೂಲವಾಗಿರುತ್ತದೆ.

ಧನಸ್ಸು — ಸರ್ವತೋಮುಖವಾಗಿ ಶ್ರೇಷ್ಠವಾದ ವಾರವಾಗಿದೆ.

ಮಕರ— ಶರೀರವು ನಿರೋಗವಾಗಿರುವದಿಲ್ಲ. ವ್ಯವಹಾರದಲ್ಲಿ ಅಡಚಣೆಗಳು, ಖರ್ಚೊಂದಗುವವು. ಕಲಹಕ್ಕೆ ದಾರಿಯನ್ನು ಕೊಡದಿರಿ.

ಕುಂಭ — ಮನಸ್ಸು ಹರ್ಷವಾಗಿರುವದಿಲ್ಲ. ಆರೋಗ್ಯವು ಸಾಧಾರಣವಾಗಿರುತ್ತದೆ. ಆರ್ಥಿಕ ಸ್ಥಿತಿಯು ಚೆನ್ನಾಗಿರದು.

ಮೀನ — ಶಾರೀರಿಕ ಆರ್ಥಿಕ ವ್ಯವಹಾರಿಕ ಮಾನಸಿಕ ಸ್ಥಿತಿಗಳು ಉತ್ತಮವಾಗಿರುತ್ತವೆ.

ಅಧಿಕಾರಿಗಳ ಭಾವನೆ ಎಂಥಾದ್ದಾಗಿರಬೇಕು

ಶ್ರೀ ಪ್ರಕಾಶಂರವರು ಏನು ಹೇಳಿರುವೀದರೆ — " ನಾನು ಪ್ರಥಮ ಪ್ರಜಾ ಸೇವಕನು ಅಧಿಕಾರವರ್ಗದವರೆಲ್ಲರೂ ನನ್ನ ತರುವಾಯ ಸೇವಕರು " ಈ ರೀತಿಯ ಭಾವನೆಯನ್ನುಳ್ಳವರಾಗಿ ದೇಶಕಾರ್ಯಗಳನ್ನು ಮಾಡಿದರು ಮಾತ್ರವೇ ಪೂಜ್ಯನೆಂದು ಹೇಳಬೇಕಾಗಿಲ್ಲ.

ಅವರ ಗೋಳು ನ್ಯಾಯವೇ?

ಪದಾರ್ಥಗಳ ಬೆಲೆಗಳು ಹೆಚ್ಚಾದವು. ಆದರೆ ನಮ್ಮ ಫೀಜು ಹೆಚ್ಚುಲಿಲ್ಲ ವಲ್ಲಾ ಎಂದು ವಕೀಲರು ಗೋಳಾಡುತ್ತಿರುವಂತೆ ಸರ್ಕಾರ ಗುಮಾಸ್ತೆಗಳಿಗೆ ಗೆ ತುಟ್ಟಿಭತ್ಯವು ಸಿಗುತ್ತಿರುವಾಗ ನಮಗೆ ಆ ಸೌಲಭ್ಯವಿಲ್ಲವಲ್ಲಾ ಎಂದು ವಕೀಲು ಗುಮಾಸ್ತರು ಗೋಳಿಡುತ್ತಿರುವರಂತೆ. ಕ್ಷೌರಿಕನು ತನ್ನ ವೃತ್ತಿಗೆ ಹಿಂದಿನ ಕೂಲಿಯೇ ಸಿಗುತ್ತಿರುವದೆಂದೂ ಕತ್ತಿಗಳ ಸಾಬೂನಿನ ಎಣ್ಣೆಯ ಬೆಲೆಯು ಮಿತಿಮೀರಿರುವದೆಂದೂ ಗೋಳಾಡುತ್ತಿರುತ್ತಾನೆ. ಈ ಬಗೆಯ ಗೋಳಾಟಗಳಿಗೆ ಕೊನೆಯಿಲ್ಲ ಮೊದಲಿಲ್ಲ. ಆದರೆ ಪರಮಾತ್ಮನನ್ನೂ ಕಾಣಲಿಲ್ಲವಲ್ಲಾ ಆತನನ್ನೂ ಹೊಂದಲಿಲ್ಲವಲ್ಲಾ ಎಂದು ಗೋಳಾಡುವರು ಅವರಲ್ಲಿ ಎಷ್ಟು ಮಂದಿಯೋ ಯಾರೂ ಇಲ್ಲವೆಂದಲ್ಲಿ ತಪ್ಪಾಗದಷ್ಟೆ ? (ಓಂ)

ಬ್ರಿಟಿಷರ ರಫ್ತು ವ್ಯಾಪಾರವು ಬಹಳ ಜೋರಿನಿಂದ ನಡೆಯುತ್ತಿದೆ.

ಬಾಪಟ್ಲದಲ್ಲಿ ಆಂಧ್ರ ಜಾತೀಯ ಮುಸಲ್ಮಾನರು ಸಭೆ ಸೇರಿ ಪಾಕಿಸ್ತಾನವು ಅವಶ್ಯಕವಿಲ್ಲವೆಂದು ತೀರ್ಮಾನ ಮಾಡಿರುವರು.

ಧೈರ್ಯ ಶಾಲಿಯು ಬಾಣಗಳನ್ನೂ ಬಕ್ಕಣಿಕೆಗಳನ್ನೂ ತುಪಾಕಿ ಗುಂಡುಗಳನ್ನೂ ಯಾವನನ್ನೂ ಲೆಕ್ಕಿಸನು ; ಉನ್ನತ ಸ್ಥಾನವನ್ನು ಅಕ್ರಮಿಸಿರುತ್ತಾನೆ.

ಶ್ರೀ ತುಕರಾಂಬಾವಾಜಿ

॥ ವಂದೇ ಮಾತರಂ ॥

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟ —

ಕಾಂಗ್ರೆಸ್

(ರಜಿಸ್ಟರ್ಡ್)

ಮಂಗಳೂರು

ಬೀಡಿಗಳು

ಜೆ. ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್ ಮೈಸೂರು

ಸತ್ಯವಾದಿ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

ಆಶೋಕಾ ಫಾರ್ಮೆಸಿ

ಲ್ಯಾನ್ಸ್‌ಡೌನ್‌ಬಜಾರ್, ಮೈಸೂರು

ಶಾಸ್ತ್ರೀಯ ಮತ್ತು ಅನುಭವಸಿದ್ಧ ಪಾದ ಔಷಧಗಳು ದೊರೆಯುತ್ತವೆ

Edited, Printed and published by M. S. Krishna Rao, at the Satvavadi Press, Chamaraja Agrahar, Myore

Get Medical Diplomas

At home : — Ayurvedic Homeopathic, Unani, etc Prospectus Free.

Old Indian Medical College Kotgarh, Simla

No. H 3 P R 48 / 45-46

ನೋಟೀಸು

ಮೈಸೂರು ಸಿಟಿ ಮುನಿಸಿಪಲ್ ಸರಹದ್ದಿನೊಳಗೆ 1946-47 ನೇ ಸಾಲಿನಲ್ಲಿ ನಡೆಸುವ ಈ ಮುನಿಸಿಪಾಲಿಟಿ ಆರೋಗ್ಯ ಶಾಖೆಯ ಆಡಳಿತಕ್ಕೆ ಒಳಪಟ್ಟ ಎಲ್ಲಾ ವಿಧವಾದ ಕಸಬುಗಳಿಗೆ ಅಗತ್ಯವಾದ ಲೈಸನ್ಸನ್ನು ಸರ್ಕಾರದಲ್ಲಿ ಪಡೆದು ಅನಂತರ ಆಯಾಯ ಕಸಬುಗಳನ್ನು ಜಾರಿಯಲ್ಲಿ ತರತಕ್ಕದ್ದು.

ಹಾಗೆ ಲೈಸನ್ಸನ್ನು ಅಪೇಕ್ಷಿಸುವ ಕಸಬುದಾರರು ತಮ್ಮ ಹೆಸರು, ವಿಳಾಸ ಕಸುಬಿನ ವಿವರ, ನಡೆಸುವ ಸ್ಥಳ ಮುಂತಾದ ತಪಶೀಲುಗಳೊಡನೆ ಆರೋಗ್ಯ ಶಾಖೆಯ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ವಿಧಾಯಕವಾದ ಫೀಜು ಪಾವತಿಯಿಂದ ಲೈಸನ್ಸು ಪಡೆಯತಕ್ಕದ್ದು. ಹಾಗೆ ಲೈಸನ್ಸು ಪಡೆಯದೆ ಕಸುಬುಗಳನ್ನು ನಡೆಸುವವರ ಮೇಲೆ ಕಾನೂನು ಪ್ರಕಾರ ಕ್ರಮನಡೆಸಲಾಗುವುದು.

ತಾ || 25-6-46 (ಸಹಿ) ಆರ್. ರಾಮಚಂದ್ರರಾವ್ ಬೊಂಬೋರೆ

ಮೈಸೂರು. ಪ್ರೆಸಿಡೆಂಟ್

ನಮ್ಮ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸ್ಪೋರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧವಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಫಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುಡುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು.

ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಮತ್ತೆ ಯುದ್ಧವೇ?

ಪ್ರಪಂಚದಲ್ಲಿ ನಾಗರೀಕ ಜಾತಿಗಳೆಂದು ಹೆಮ್ಮೆ ಪಡುತ್ತಿರುವ ಶ್ವೇತ ಜಾತಿಗಳವರು ಪುನಹ ವತ್ತೊಂದು ಯುದ್ಧಕ್ಕೆ ಡಾವಿ ಪೂಡುತ್ತಿರುವರು. ಹಿಂದಿನ ಯುದ್ಧದ ವ್ಯವಹಾರವು ಇನ್ನೂ ಮುಗಿಯಲಿಲ್ಲ, ಆಗಲೇ ಬಾಳೇ ಗಿಡದ ಪಸಿಗಳಂತೆ ಹೊಸಯುದ್ಧಕ್ಕೆ ಬೀಜವ್ಯ ಪೆಡಲ್ಪಡುತ್ತಿದೆ ಬಲ್ಗೇರಿಯಾ ರೊಮೇನಿಯಾ ಸೊದಲಾದ ದೇಶಗಳಲ್ಲಿ ರಷ್ಯದ-ಪ್ರೊಭಾತ್ವಾಹದಿಂದ ಕಮ್ಯೂನಿಸ್ಟು ಸರ್ಕಾರವು ಜಾರಿಯಲ್ಲಿ ಬರುತ್ತಿರುವದರಿಂದ ರಷ್ಯದ ಪ್ರಾಬಲ್ಯವು ಹೆಚ್ಚುತ್ತಿರುವದೆಂಬ ಭಯವು ಬ್ರಿಟನ್ನು ಅಮೆರಿಕಗಳಿಗೆ ಪೂರ್ಣವಾಗಿ ಉಂಟಾಗಿದೆ ಒಂದು ಕಡೆ ಪಶ್ಚಾದ್ಯದಲ್ಲಿ ರಷ್ಯದ ಅಧಿಕಾರವು ಸ್ಥಿರವಾಗಿ ನೆಲೆಗೊಂಡು ಬ್ರಿಟನ್ನಿಗೆ ಅವಸರವಾಗಿ ನಮ್ಮ ಮಾತಿಗೆ ಬಂಬೇಡಿರೆಂದೂ ಮಂಗಳಾರತಿಗಳು ಆಗುತ್ತಿರುವಾಗ ಮತ್ತೊಂದು ಕಡೆ ಇಟಲಿ ರಾಜನು ಪಿಂಟನ್ನು ತೆಗೆದುಕೊಂಡು ತನ್ನ ಅಧಿಕಾರವನ್ನು ಪ್ರಜೆಗಳ ಹಸ್ತಗತ ಮಾಡಿದ್ದರಿಂದ ಇಟಲಿಯಲ್ಲಿಯೂ ಕೂಡ ಬ್ರಿಟನ್ನಿಗೆ ಮಾತು ಬರಿಕೆಯು ಕಡಿಮೆಯಾಗುತ್ತಿರುವದೆಂದೇ ಅಂದುಕೊಳ್ಳಬೇಕಾಗುತ್ತದೆ.

ಇನ್ನು ಸ್ಪೈನಸೆಲ್ಲಿ ಫ್ರಾಂಕೋ ಸರಕಾರಕ್ಕೆ ರಜಾ ಕೂಡಿಸಲು ರಷ್ಯವು ಯತ್ನಿಸುತ್ತಿರುವಾಗ, ಅಲ್ಲಿಯೂ ರಷ್ಯದ ಸ್ವಾಬಲ್ಯವು ಹೆಚ್ಚುವುದೋ ಏನೋ ಎಂಬ ಭಯದಿಂದ ಅಮೇರಿಕಾವು ಬ್ರಿಟನ್ನಿನ ಪರವಾಗಿಯೇ ತಾಳಹಾಕಲು ಕಾರಣವಿಲ್ಲದೇ ಇಲ್ಲ. ಯೂರೋಪಸ್ಟಿಲ್ಲವನ್ನೂ ತನ್ನ ಮಾತಿನಂತೆ ಸಂತೆ ಮಾಡಿಕೊಳ್ಳಬೇಕೆಂದು ರಷ್ಯವು ಪ್ರಯತ್ನಿಸುತ್ತಿರುವದರಿಂದ, ಯೂರೋಪಿನ ವ್ಯಾಪಾರವು ಕೂಡ ಒಹಳವಟ್ಟಿಗೆ ರಷ್ಯಾವಿಗೆ ಹೋಗಬಹುದು. ಆದರೆ ಅಮೇರಿಕಾಕ್ಕೆ ಲಾಭವಾಗಲು ಅವಕಾಶವು ಒಹಳ ಕಡಮೆ; ಇಷ್ಟೇ ಅಲ್ಲ ಈಚೆಗೆ ಯುದ್ಧೋಪಹತಗಳಾದ ಯೂರೋಪವು ದೇಶಗಳೊದಿಗೆ ಮಾಡುವ ವ್ಯಾಪಾರದಿಂದ ಅಷ್ಟು ಅಧಿಕಲಾಭವು ಬರುವುದಿಲ್ಲವೆಂಬ ಅನುಮಾನವು ಅಮೆರಿಕಕ್ಕೆ ಇದೆ ಪೂರ್ವ ದೇಶಗಳ ವ್ಯಾಪಾರ ಮಾತ್ರ ಮಿಕ್ಕಿದೆ ರಷ್ಯಾವಿಗೆ ಅವಕಾಶವನ್ನಿತ್ತಲ್ಲಿ ಈ ವ್ಯಾಪಾರವನ್ನು ಕೂಡ ಬಲ್ಲಿ ಸಂಗಡವದೋ ಎಂದು ಸಾಧ್ಯವಾಗುವವರೆಗೂ ಅದನ್ನು ತಾನೇ ಅನುಭವಿಸಬೇಕೆಂದು ಅಮೆರಿಕಾ ಬ್ರಿಟನ್ನುಗಳು ರಷ್ಯದ ಮೇಲೆ ಪೋಟೀ ಹೋಗುತ್ತಿವೆ. ಅಮೆರಿಕ ಬ್ರಿಟನ್ನುಗಳಿಗೂ ಪೋಟೀ ಇಲ್ಲದೆ ಇಲ್ಲ ಇವು ಎರಡೂ ಇಂಗ್ಲೀಷು ಮಾತನಾಡುವ ದೇಶಗಳೂ ಸಗೋತ್ರರೇ ಆದುದರಿಂದ ಅವರೊಳ್ಳೆ ಆವರಿಗೆ ಎಷ್ಟು ಭೇದಗಳಿದ್ದರೂ ಮಗೆರನೆಯ ದೇಶವಾದ ರಷ್ಯದ ಮೇಲೆ ಮಾತ್ರ ಇಬ್ಬರೂ ಕಲೆತು ಒಂದು ಕಾಲಿನ ಮೇಲೆ ನೆಗೆಯುತ್ತಿದ್ದಾರೆ. ಆದುದರಿಂದ ಈ ಪೈಪೋಟಿಯು ಕ್ರಮಕ್ರಮವಾಗಿ ಮೂರನೇ ಯುದ್ಧಕ್ಕೆ ದಾರಿ ತೆಗೆಯಬಹುದೆಂದೂ ರಾಜಕೀಯವೇತ್ತರು ಚರ್ಚಿಲ್‌ರಂಥವರು ಕೂಡ ಅಂದುಕೊಳ್ಳುತ್ತಿದ್ದಾರೆ.

ಇದಕ್ಕೆ ನೆರವಾಗಿ ಆಟಂಬಾಂಬು ವಿಷಯವು ಒಹಳ ಆಲ್ಲಕಲ್ಲೋಲಗಳಿಗೆ ಕಾರಣವಾಗುತ್ತಿದೆ ಒಂದು ಕಡೆ ಜುಲೈ ಒಂದನೇ ತಾರೀಖಿನ ದಿನ ಮಹಾ ಸಮುದ್ರ ಮಧ್ಯದಲ್ಲಿ ಆಟಂಬಾಂಬು ಪ್ರಯೋಗದ ಪಲಿತಾಂಶವನ್ನು ತಿಳಿದುಕೊಳ್ಳಲು ಪ್ರಯತ್ನಗಳನ್ನು ನಡಿಸುತ್ತಲೂ ಅಮೆರಿಕ ಪ್ರೆಸಿಡೆಂಟು ಟ್ರೂಮ್ಯಾನ್ ಅಣುಪರಿಶೋಧನಾವಕಾಶವನ್ನು ಅಂತರ್ಜಾತೀಯವಾಗಿ ಮಾಡಬೇಕೆಂದು ಪ್ರತಿಪಾದಿಸುತ್ತಿದ್ದಾನೆ. 'ಇದರ ಭಾವವೇನೂ ತಿರುಮಲೇಶ' ಎಂದು ಆಲೋಚಿಸಿದಲ್ಲಿ ಆಟಂಬಾಬಿಗಿಂತ ಅತಿ ಘೋರವಾದ ಬೇರೊಂದು ಅಸ್ತ್ರವು ಅಮೆರಿಕದ ಕೈಯ್ಯಲ್ಲಿದೆಯೆಂಬುದು ಅಮೆರಿಕ ನೌಕಾಶಾಖಾಧಿಕಾರಿಯು ಮಾಡಿರುವ ಪ್ರಕಟಣೆಯಿಂದ ಸಮಾಧಾನವು ಸಿಗುತ್ತದೆ. ಪರಮಾಣು ಪ್ರಯೋಗವು ಅಮೆರಿಕಕ್ಕೆ ಸಂಪೂರ್ಣವಾಗಿ ತಿಳಿದಿರುವದೇ ಅಲ್ಲದೆ ಅದರ ತಾತನಂಥಾ ಮತ್ತೊಂದು ಪ್ರಯೋಗವು ಕೂಡ ತಿಳಿದಿರುವದರಿಂದ ಸಹಜವಾಗಿ ಇತರ ದೇಶಗಳವರ ಬಲಾಬಲಗಳನ್ನು ಕಂಡುಕೊಳ್ಳಬೇಕೆಂಬ ಅಭಿಲಾಷೆಯು ಅಮೆರಿಕಾಕ್ಕೆ ಇರುತ್ತದೆ. ಆದರೆ ರಷ್ಯವು ಕೂಡ ಈ ವಿಷಯದಲ್ಲಿ ಅಮೆರಿಕಾಕ್ಕಿಂತ ಎರಡು ಪುಟ ಹೆಚ್ಚಾಗಿ ಓದಿಕ್ಕೊಂಡಿರುವಂಥಾದ್ದಾದರಿಂದ ತಮ್ಮ ರಹಸ್ಯಗಳನ್ನು ಹೊಂಗೆಡವದೆ ' ನಮಗೆ ಕೂಡ ಪರಮಾಣು ಶಕ್ತಿ ಮಾತ್ರವೇ ಅಲ್ಲದೆ ಇನ್ನೂ ಎಷ್ಟೋ ಇತರ ಶಕ್ತಿಗಳು ಕೂಡ ಜಾಗ್ರತೆಯಂತೆಯೇ ಲಭಿಸುತ್ತವೆ ' ಎಂದು ರಷ್ಯನ್ನೂ ಅಧಿಕಾರಿಗಳು ಹೆದರಿಸುತ್ತಿದ್ದಾರೆ. ಆದುದರಿಂದ ಈ ಕಡೆಗೆ ರಷ್ಯಾ ಈ ಕಡೆ ಅಮೆರಿಕಾ ಈ ಎರಡಕ್ಕೂ ಕೂಡ ಅಣು ಶಕ್ತಿಯೇ ಅಲ್ಲದೆ ಇನ್ನೂ ಶಕ್ತಿಗಳಿಲ್ಲವೆಂದು ಅರ್ಥವಾಗುತ್ತದೆ ಆದುದರಿಂದ ಒಬ್ಬರ ಮೇಲೆ ಮತ್ತೊಬ್ಬರು ಕಾಲು ಕೆರೆಯಲು ಅಧೈರ್ಯಪಡಬೇಕಾಗಿಲ್ಲ ಹೀಗೆ ಪುನಃ ಯುದ್ಧವು ಸಂಪ್ರಾಪ್ತವಾಗಲು ಕೂಡ ಅವಕಾಶವಿಲ್ಲದೆ ಹೋಗಲಿಲ್ಲ. ಬ್ರಿಟನ್ನಿಗೆ ಇನ್ನೂ ಇಂಥಾ ಶಕ್ತಿಗಳು ಸಂಪೂರ್ಣವಾಗಿ ಸಿದ್ಧಿಸಿರುವಂತೆ ಕಾಣುವುದಿಲ್ಲ. ಈ ಕಾರಣದಿಂದ ಜರ್ಮನಿಯಿಂದ ಕೆಲವರು ಶಾಸ್ತ್ರವೇತ್ತರನ್ನು ಕರೆಕಳುಹಿಸಿ ರಾಕೆಟ್ಟುಗಳ ಪರಿಶೋಧನೆಗಳನ್ನು ಮಾಡಿಸುವಿಕೆಯಿಂದ ತಾನೂ ರಷ್ಯಾ ಅಮರಿಕಾಗಳ ಸಮಾನ ಶಕ್ತಿಯನ್ನು ಹೊಂದಲು ಯತ್ನಿಸುತ್ತಿದೆ.

ಆದುದರಿಂದ ಒಹುಶಃ ಜಾಗ್ರತೆಯಲ್ಲಿಯೇ ಪುನಃ ಪ್ರಪಂಚ ಯುದ್ಧವು ಬರಬಹುದೆಂದೂ ಅದರಲ್ಲಿ ಅಣುಶಕ್ತಿಯೂ ಆದನ್ನು ವಿಾರಿದ ಶಕ್ತಿಯೂ ಅಯುಧಗಳಾಗಿರುತ್ತವೆಂದೂ ಅಮೆರಿಕಾ ಬ್ರಿಟನ್ನೂ, ರಷ್ಯಾಗಳು ಮುಖ್ಯ ಪಾತ್ರ ಧಾರರೆಂದೂ ಅಂದು ಕೊಳ್ಳಲು ಆಕ್ಷೇಪಣೆ ಇರುವುದಿಲ್ಲ (ದಿ. ವಾ.)

ಮೂರನೆಯ ಮಹಾಯುದ್ಧದ ಅವಶ್ಯಕತೆ ಇಲ್ಲದಂತೆ ಪರಮಾತ್ಮನು ವಿತ್ತವಂಡಲಿಯವರ ಮಾನಸದಲ್ಲಿ ಅಖಂಡ ಶಾಂತಿ ಬೀಜವನ್ನು ನೆಡಲೆಂದು ಹಾರೈಸೋಣ. —ಸಂ |

ಕಾಮನ್ಸ್‌ನಲ್ಲಿ ಸರ್ಕಾರದ ಮೇಲೆ ದಾಂಧಲೆ

ಲಂಡನ್ ಜೂನ್ 1 — ಲೇಬರ್ ಸರ್ಕಾರವನ್ನು ಖಂಡಿಸಿ ಪ್ಯಾಲಿಸ್ಟೈನ್ ಸಮಸ್ಯೆ ಚರ್ಚೆಗೆ ಒಂದು ನಿಲುವಳಿ ಸೂಚನೆಯನ್ನು ಒಗ್ಟೆ ಲೇಬರ್ ಸದಸ್ಯರಾದ ಸಿಲ್ವಿರ್‌ಕ್ಯೂರವರು ತಂದಿರುವದು ಸ್ವಾರಸ್ಯವಾಗಿದೆ.

ಫ್ರಾಂಕೊ ಅಮೆರಿಕಾವನ್ನು 70000000 ಡಾಲರ್ ಸಾಲಾ ಕೇಳಿದ್ದುದು ದೊಡ್ಡಯ ಆರಾದೆಂದು ಯೋಚಿಸಿದ್ದೆನೆಂದು ಹೇಳಲಾಗಿದೆ. ಬ್ರಿಟನ್ನಿಂದಲೂ ಸಾಲಾ ಸಿಕ್ಕುವಂತಿಲ್ಲ.

ಪಂ|| ನೆಹರೂ
ಕಾಶ್ಮೀರಕ್ಕೆ ಹೋಗುವರು

ಕಾನ್ಪುರ ಜುಲೈ 2 — ಪಂಡಿತ್ ಜವಾಹರಲಾಲ್ ನೆಹರುರವರು ಭಾರತ ಕಾಂಗ್ರೆಸಿನ ಅಧಿವೇಶನದಲ್ಲಿ ಭಾಗವಹಿಸಲು ಕಾನ್ಪುರ ಪೂರ್ಗವಾಗಿ ಬೊಂಬಾಯಿಗೆ ತೆರಳಿದರು. ಅಧಿವೇಶನ ಮುಗಿದ ನಂತರ ಪುನಃ ನಾನು ಕಾಶ್ಮೀರಕ್ಕೆ ಭೇಟಿ ಕೊಡುವುದಾಗಿ ಪಂ|| ನೆಹರು ತಿಳಿಸಿದರು.

ಪ್ರಪಂಚಡೆ ಚಳುವಳಿ

ಲೈಲಾಪುರ್ ಜುಲೈ 1 — ಸಚಿವ ನಿಯೋಗ ವಿರುದ್ಧ ಪ್ರಪಂಡ ಚಳುವಳಿ ನಡೆಸಲು ಸಿಕ್ಕರು ಸಿದ್ದರೆಂದು ಮಾಸ್ಟರ್ ತಾರಾಸಿಂಗರ ಅಧ್ಯಕ್ಷತೆಯಲ್ಲಿ ನಡೆದ ಸಿಕ್ಕರ ರಾಜಕೀಯ ಸಮ್ಮೇಳನದಲ್ಲಿ ತೀರ್ಮಾನವಾಯಿತು.

ಅಂತ್ಯ ಚಳುವಳಿ ಹೂಡಿ

ಲಕ್ನೋ ಜುಲೈ 2 — ಬ್ರಿಟೀಷ್ ಮಂತ್ರಿ ನಿಯೋಗದ ಸಲಹೆಗಳೆಲ್ಲವನ್ನು ಸಂಪೂರ್ಣವಾಗಿ ನಿರಾಕರಿಸಿ ಭಾರತದ ಸ್ವಾತಂತ್ರ್ಯವನ್ನು ಪಡೆಯುವ ಸಲುವಾ ಅಂತ್ಯ ಚಳುವಳಿಯನ್ನು ಹೂಡಿ ಎಂಬ ನಿರ್ಣಯವನ್ನು ಅಖಿಲ ಭಾರತ ಯುವಕ ಸಂಘದ ಅಧ್ಯಕ್ಷ ಶ್ರೀ ಎ. ಶೆರ್ವಾಣಿ ಕಾಂಗ್ರೆಸ್ ಅಧಿವೇಶನಕ್ಕೆ ಕಳುಹಿಸಿದ್ದಾರೆ.

.....

× ಎ. ಐ. ಸಿ. ಸಿ. ಅಧಿವೇಶನದಲ್ಲಿ ಹಾವಾ ನಿಮಿತ್ತ ರಾಜೇಂದ್ರ ಬಾಬು ಭಾಗವಹಿಸುವುದಿಲ್ಲ.

ವೃತ್ತಾಂತ ಸಂಗ್ರಹ

15000 ರಷ್ಯನ್ ಶಾಸ್ತ್ರಜ್ಞರು ಸೋವಿಯೆಟ್ ರಷ್ಯ ಯುನಿಯನ್ನಿನಲ್ಲಿ ಎಲ್ಲೆಲ್ಲಿ ಲೋಹದ ಗಣಿಗಳು ಸಿಗುವ ವೋ ಪರಿಶೋಧನೆಯನ್ನು ಮಾಡುತ್ತಿರುವರು.

ದೇವಾಲಯಗಳ ಧನವನ್ನು ಮತವಿದ್ಯೆಗೇ ಆಲ್ಲದೆ ಲೌಕೀಕ ವಿದ್ಯೆಗೆ ಉಪಯೋಗಿಸುವಂತೆ ಮಾಡಲು ಯೋಚಿಸುತ್ತಿರುವ ವಿಷಯದಲ್ಲಿ ಮದ್ರಾಸು ಕಾಂಗ್ರೆಸ್ಸು ಮಂತ್ರಿವರ್ಗದವರು ಅಭಿನಂದನೀಯರು.

ನವದೆಹಲಿ ಜುಲೈ 2 — ತಾ|| 15 ಮತ್ತು 16 ರಲ್ಲಿ ಲಂಡನ್ನಿನ ಕಾಮನ್ಸ್ ಸಭೆಯಲ್ಲಿ ಭಾರತದ ಬಗ್ಗೆ ಚರ್ಚೆ ನಡೆಯುವುದೆಂದು ಹೇಳಲಾಗಿದೆ ಮಿ|| ಚರ್ಚಿಲ್ಲರು ಕಾರ್ಮಿಕ ಸರ್ಕಾರದ ಭಾರತ ಮೇಲಿನ ನೀತಿಯನ್ನು ಟೀಕಿಸುವರು

ಆಗಸ್ಟ್ ಗಲಭೆಗಳಲ್ಲಿ ಉದ್ಯೋಗ ಹೀನಂಗದವರಿಗೆ ಪುನಃ ಕೆಲಸ ಕೊಡಲು ಬೊಂಬಾಯಿ ಸರ್ಕಾರ ಯೋಚಿಸಿದೆ.

1–10–46 ರಿಂದ ಸೇಲಂ ಉತ್ತರ ಆರ್ಕಾಡು, ಕಡಪ, ಚಿತ್ತೂರು ಜಿಲ್ಲೆಗಳಲ್ಲಿ ಮದ್ಯ ನಿಷೇಧವು ಪುನಃ ಜಾರಿಗೆ ತರಲ್ಪಡುವುದು.

ಪೂರಿಯ ಜಗನ್ನಾಥ ದೇವರ ರಥವನ್ನು ಸ್ವಾಂತಪ ಗೌರ್ನರ್ ಆದ ಸಂತ್ರಿವೇದಿಯವರು ಎಳೆದರು.

ಭಾರಿ ಗಲಭೆ

ಅಹ್ಮದಾಬಾದ್ ಜುಲೈ 2 — ಕೋಮುವಾರು ಗಲಭೆ ಇಲ್ಲಿ ಘೋಷವಾಗಿದೆ, ಪೋಲಿಸರು 9 ಸಾರಿ ಗುಂಡು ಹಾರಿಸಿದರು. ಒಟ್ಟು 33 ಮರಣ 250 ಗಾಯಗಳಾಗಿವೆ ಕರ್ಫ್ಯೂ ಜಾರಿಯಾಗಿದೆ. ಮಿಲಿಟರಿ ನಗರವನ್ನು ಕಾಯುತ್ತಿದೆ.

ಭಾರಿ ಬೆಲೆಯ ಹ್ಯಾಟು

ಕೆಂಬ್ರೋಡಿಯಾ ರಾಜ ಸಿಹೋವೌಕ್ ರಿಗೆ ಒಂದು ಬೌಲರ್ ಹ್ಯಾಟು ಬಹು ಮಾನವಾಗಿ ದೊರೆತಿದೆ. ಆ ಹ್ಯಾಟಿಗೆ ತುದಿಯಲ್ಲಿ ಒಂದು ವಜ್ರದ ಗೊಂಚಲು ಇದೆ. ಹ್ಯಾಟಿನ ಮೌಲ್ಯ 20 ಸಾವಿರ ಪೌಂಡುಗಳು.

ಫಿಲಿಪೈನ್ಸ್ ದ್ವೀಪಗಳಿಗೆ ಮೊನ್ನೆಯಿಂದ ಸ್ವಾತಂತ್ರ್ಯ ದೊರೆಯಿತು. ಡಾ|| ಸೋಯಿಕಾರ್ನೊ ಅವರಿಗೆ ಸಂದೇಸ ಕಳಿಸಿರುವರು.

ಅಣು ಬಾಂಬು ಪ್ರಯೋಗ ಕುರಿತು ಅದರಿಂದ ಶಾಂತಿ ಮತ್ತು ಸ್ವಾತಂತ್ರ್ಯ ದೊರೆಯುವುದಿಲ್ಲವೆಂದು ಪಂ|| ನೆಹರು ಅಭಿಪ್ರಾಯಪಟ್ಟಿದ್ದಾರೆ.

ಜರ್ಚೆಯ ಕಾಲದಲ್ಲಿ ನೂತನ ತಾತ್ಕಾಲಿಕ ಯೋಜನೆಯನ್ನು ವಿವರಿಸುವುದಿಲ್ಲವೆಂದು ನಂದಿಪ್ರಕಾರ ತಿಳಿಯುವುದು. ಘಟನಾ ಸಮಿತಿ ಜುನಾವಗೆವರೆಗೂ ತಾತ್ಕಾಲಿಕ ಯೋಜನೆಯ ಘೋಷಣೆ ನಡೆಯುವುದಿಲ್ಲವೆಂದು ಹೇಳಲಾಗಿದೆ.



ರೆಡಿಯೋ ಹಾಡಗಾರನ ಭಾಗ್ಯ

ಬೊಬ್ ಫಿಲಿಪ್ಸ್ ಇವನು ಅಮೆರಿಕದ ಪ್ರಸಿದ್ಧ ರೇಡಿಯೋ ಹಾಡುಗಾರ ಆತ ಅವಿವಾಹಿತನಾಗಿದ್ದಾನೆ. ಅವನನ್ನು ವಿವಾಹವಾಗಲು ನೂರಾರು ತರುಣೀಯರ ಅರ್ಜಿ ಬಂದಿರುತ್ತದೆ ಫಿಲಿಪ್ಸನ ಹಾಡುಗಾರಿಕೆಯ ಇಂಪನ್ನು ಸವಿದವರಲ್ಲಿ ಹಲವರು ಅವನೊಡನೆ ವಿವಾಹ ಸಂಬಂಧ ಬೆಳಿಸಲಪೇಕ್ಷಿಸಿದ್ದಾರೆ. ವಿವಾಹಕ್ಕಾಗಿ ಫಿಲಿಪ್ಸನಿಗೆ ಬಂದ ಅರ್ಜಿಗಳಲ್ಲಿ 16 ವರ್ಷದ ಎಳೆ ತರುಣಿಯಿಂದ ಹಿಡಿದು 84 ವರ್ಷ ಪ್ರಾಯದ ಮುದುಕಿಯರ ವರೆಗೆ ಇದ್ದಾರೆ ಒಂದು ಪ್ರಸಿದ್ಧ ಥಿಯೇಟರು ಮಾಲಕನ ಹೆಂಡತಿ ಫಿಲಿಪ್ಸನಿಗೆ ಒರೆದಿದ್ದಾಳೆ; ನೀನು ನನ್ನನ್ನು ಪತ್ನಿಯಾಗಿ ಸ್ವೀಕರಿಸುವುದಿದ್ದರೆ ನನ್ನ ಪತಿಯೊಡನೆ ವಿವಾಹವಿಚ್ಛೇದ ಹೂಡಲು ಸಿದ್ಧಳಿದ್ದೇನೆ ಫಿಲಿಪ್ಸನು ಇವರಲ್ಲಿ ಅತ್ಯಂತ ಸುಂದರಿಯನ್ನು ಆರಿಸಿ ಮದುವೆಯಾಗಲು ಒಂದು ಉಪಾಯ ಹೂಡಿದ್ದಾನೆ ತನಗೆ ಅರ್ಜಿ ಕಳಿಸಿದವರನ್ನೆಲ್ಲಾ ಒಂದು ಪೆರೇಡ್ ನಡೆಸಿ, ಅವರಲ್ಲಿ ಖುಶಿ ಆದವಳನ್ನು ಆರಿಸುಪ ಹಂಚಿಕೆ ಅವನದು. (ಸ್ಯ.)

ಮದ್ರಾಸು ಸ್ಪೀಕರರ ತ್ಯಾಗ

ಮದ್ರಾಸು ಅಸೆಂಬ್ಲಿ ಸ್ಪೀಕರು ತಮ್ಮ ಸಂಬಳ ಮತ್ತು ಭತ್ಯಗಳಿಂದ 500 ರೂಪಾಯಿಗಳನ್ನು ಪ್ರತ್ಯೇಕಿಸಿ ಪ್ರತಿ ತಿಂಗಳಲ್ಲಿಯೂ ಬಡ ವಿದ್ಯಾರ್ಥಿಗಳಾದ ಹರಿಜನರಿಗೆ ಸಹಾಯವನ್ನು ಮಾಡಲು ನಿರ್ಧರ ಮಾಡಿಕೊಂಡಿರುವರು. ತಪ್ಪು ಅವಶ್ಯಕತೆಗಳನ್ನು ತಪ್ಪಿಸಿಕೊಂಡು 500 ರೂಪಾಯಿಗಳನ್ನು ಈ ಉತ್ತಮ ಕಾರ್ಯಕ್ಕೆ ಕೊಂಡುವದೆಂದರೆ ಬಹಳ ಶ್ಲಾಘನೀಯವಾದ ತ್ಯಾಗವೆನ್ನಬೇಕು.

ದಕ್ಷಿಣ ಆಫ್ರಿಕಾ ಸತ್ಯಾಗ್ರಹಿಗಳ ನಾಶಕ್ಕೆ ನಾನು ಅಳುವುದಿಲ್ಲ

ಪೂನಾ ಜುಲೈ 2 — ಗಾಂಧೀಜಿಯವರ ಪ್ರಾರ್ಥನಾ ಸಭೆಯಲ್ಲಿ ಅನೇಕರು ಸೇರಿದ್ದರು. ದಕ್ಷಿಣ ಆಫ್ರಿಕಾ ಐರೋಪ್ಯರ ಭಾರತ ವಿರುದ್ಧ ಶಾಸನವನ್ನು ಖಂಡಿಸಿದರು. ಶ್ವೇತರ ಅಶಾಂತಿ ಕಾರ್ಯಾಚರಣೆಯನ್ನು ಖಂಡಿಸಿದರು. 'ದಕ್ಷಿಣ ಆಫ್ರಿಕಾ ಸತ್ಯಾಗ್ರಹಿಗಳು ಭಾರತದ ಗೌರವವನ್ನು ಕಾಪಾಡುತ್ತಿರುವರು' ಎಂಬುದಾಗಿ ಗಾಂಧೀಜಿಯವರು ಸಭೆಯಲ್ಲಿ ತಿಳಿಸಿದರು

ಬಂಗಾಳಕ್ಕೆ ಅಕ್ಕಿ ಸಿಕ್ಕಿತು

ಕಲ್ಕತ್ತಾ ಜುಲೈ 2 — ಬರ್ಮಾದಿಂದ 9 ಸಾವಿರ ಟನ್ ಅಕ್ಕಿ ಈ ತಿಂಗಳಲ್ಲಿ ಬಂಗಾಳಕ್ಕೆ ಸಿಕ್ಕುವುದು.

ನಿಯೋಗ ಲಂಡನ್ ಸೇರಿತು

ಲಂಡನ್ ಜುಲೈ 2 — ಭಾರತಕ್ಕೆ ಆಗಮಿಸಿದ್ದ ಬ್ರಿಟೀಷ್ ಮಂತ್ರಿ ನಿಯೋಗ ಲಂಡನ್ ಸೇರಿತು. ಮುಖ್ಯಾಂಶಗಳಲ್ಲಿ ನಮಗೆ ಜಯದೊರೆತಿರುವುದಾಗಿ ಲಾರ್ಡ್ ಪೆಥಿಕ್ ಲಾರೆನ್ಸ್ ತಿಳಿಸಿದರು. ಲಂಡನ್ನಿನಲ್ಲಿ ಅವರಿಗೆ ಸುಸ್ವಾಗತ ಸಿಕಿಕ್ಕಿತು.

ನಷ್ಟವೆಲ್ಲಾ ಕೊಡಬೇಕು

ಬೊಂಬಾಯಿ ಜುಲೈ 3 — ಹಿಂದೆ ನಡೆದ ರಾಯಲ್ ಇಂಡಿಯನ್ ನಾವಿಕ ದಂಗೆಯಲ್ಲಿ ಪೌರಸಭೆಗೆ ರೂ. 4 ಲಕ್ಷ ನಷ್ಟವಾಗಿರುವುದೆಂದು ಪೌರಸಭೆ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಷ್ಟವನ್ನು ಕೊಡಬೇಕೆಂದು ಕೇಳಿದೆ.

ಭಾರತಕ್ಕೆ ಕೆನಡಾ ವಸ್ತುಗಳು

ಮಾಂಟ್ರೀಲ್, ಜುಲೈ 4 — 21 ಸಾವಿರ ಟನ್ನಿನ ಹಡಗು ಕೆನಡಾದಿಂದ ಭಾರತಕ್ಕೆ ತೇಲಿ ಬರುತ್ತಿದೆ ಅದರಲ್ಲಿ ಹೆಚ್ಚಿನ ಭಾಗ ನ್ಯೂಸ್‌ಪ್ರಿಂಟ್ ಕಾಗದ. ಉಳಿದುದು ಹಿಟ್ಟು —

ನಿಷೇಧಾಜ್ಞೆ ರದ್ದು

ಹೈದರಾಬಾದು ಜುಲೈ 3 — 1938 ನೇ ಸೆಪ್ಟಂಬರ್ ತಿಂಗಳಲ್ಲಿ ಹೈದರಾಬಾದ್ ಸರ್ಕಾರವು ಸಂಸ್ಥಾನ ಕಾಂಗ್ರೆಸ್ ಮೇಲೆ ನಿಷೇಧಾಜ್ಞೆಯನ್ನು ಜಾರಿ ಮಾಡಿತ್ತು. ಆ ನಿಷೇಧಾಜ್ಞೆಯನ್ನು ಇಂದಿನಿಂದ ಸರ್ಕಾರವು ರದ್ದು ಗೊಳಿಸಿದೆ.

ಹಗಲು ದರೋಡೆ

ಪೂನಾ ಜುಲೈ 3 — ಇಲ್ಲಿಯ ಇಂಪೀರಿಯಲ್ ಬ್ಯಾಂಕಿನ ಶಾಖೆಯಲ್ಲಿ ಹಗಲಿನಲ್ಲೆ ಬ್ಯಾಂಕಿಗೆ ಕಟ್ಟಲು ಹವೇಲಿ ಮಾಂಲೆ ತದಾರ್ ಆಫೀಸು ಜವಾನನು ಚಿಲ್ಲರೇ ಎಣಿಸುತ್ತಿದ್ದಾಗ ಪಕ್ಕದಲ್ಲಿ ಟ್ಟುಕೊಂಡಿದ್ದ 11 ಸಾವಿರ ರೂ. ಗಳ ನೋಟಿನ ಕಂತೆಯನ್ನು ಹತ್ತಿರದವನು ಹಾರಿಸಿಕೊಂಡು ಹೋದನು.

ಮತ್ತೊಂದಾವರ್ತಿ ಪ್ರಯೋಗ

ಸ್ಯಾನ್ ಫ್ರಾನ್ಸಿಸ್ಕೋ ಜುಲೈ 2 — ಅಣು ಬಾಂಬು ಪ್ರಯೋಗಕ್ಕೆ ಮಿಸಲಾಗಿದ್ದ 'ಸಕಾವ' ಎಂಬ ಜಪಾನಿ ಹಡಗು ಪ್ರಯೋಗದಿಂದ ಮುಳುಗಿತು. ಇಪ್ಪತ್ತೊಂದು ದಿವಸಗಳಲ್ಲಿ ನೀರಿನ ಮೇಲೆ ಮತ್ತೆ ಅಣು ಪ್ರಯೋಗವನ್ನು ನಡೆಸಲಾಗುವುದು.

ಅಣು ಬಾಂಬು

ನ್ಯೂಯಾರ್ಕ್ ಜುಲೈ 1 — ಈ ದಿವಸ 9-31 ಗಂಟೆಗೆ 'ನೆವಾಡ' ಹಡಗಿನ ಮೇಲೆ ಅಣು ಬಾಂಬು ಪ್ರಯೋಗ ನಡೆಸಲಾಯಿತು. ಸುತ್ತಲೂ ಇದ್ದ 72 ಹಡಗುಗಳಿಗೆ ಕೂಡಲೇ ಬೆಂಕಿ ಹತ್ತಿಕೊಂಡಿತು. ಬಾಂಬು ಪ್ರಯೋಗಿಸಿದ ವಿಮಾನ ಸುಖವಾಗಿ ಹಿಂದಿರುಗಿತು. ಸಾವು ನೋವುಗಳೇನೂ ಆಗಲಿಲ್ಲ ಬಾಂಬು ಬಿದ್ದ 2 ನಿಮಿಷಗಳ ನಂತರ ಸ್ಫೋಟನೆಯಾಯಿತು. ತೆರೆಗಿನ ಗಿಡಗಳು ಸಹಾ ಸುಖವಾಗಿರುವವು. ನಿರೀಕ್ಷಿಸಿದಷ್ಟು ಫಲ ದೊರೆಯಲಿಲ್ಲವೆಂದು ವಿಜ್ಞಾನಿಬೊಬ್ಬರು ಅಭಿಪ್ರಾಯಪಟ್ಟರು.